# ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಚೇರಿ ಶಿವಮೊಗ್ಗ

## ಮೌಲ್ಯಾಂಕನ-ಮಾರ್ಚ್-2024 ಮಾದರಿ ಪ್ರಶ್ನೆ ಪತ್ರಿಕೆ

ತರಗತಿ : 9 ವಿಷಯ : ಸಮಾಜ ವಿಜ್ಞಾನ ಅಂಕ : 80

**I. ಬಹು ಆಯ್ಕೆ ಪ್ರಶ್ನೆಗಳು. 1x8=8**

1. ಮಧುರ ವಿಜಯಂ ಕೃತಿ ಬರೆದವರು

A) ಪ್ರೌಢದೇವರಾಯ B) ಗಂಗಾದೇವಿ C) ಅಲ್ಲಸಾನಿ ಪೆದ್ದಣ್ಣ D) ಲೋಕ ಮಹಾದೇವಿ

2. ತಾಜ್ ಮಹಲ್ ಅನ್ನು ನಿರ್ಮಿಸಿದವನು

A) ಶಹಜಹಾನ್ B) ಅಕ್ಬರ C) ಜಹಾಂಗೀರ್ D) ಔರಂಗಜೇಬ್

3. ಲೋಕಸಭಾ ಸದಸ್ಯರಾಗಲು ಇರಬೇಕಾದ ಕನಿಷ್ಠ ವಯೋಮಾನ

A) 18 ವರ್ಷಗಳು B) 20 ವರ್ಷಗಳು C) 35 ವರ್ಷಗಳು D) 25 ವರ್ಷಗಳು

4. ಭಾರತೀಯ ಸಮಾಜದ ಆಧಾರ ಸ್ತಂಭ

A) ಗ್ರಾಮೀಣ ಸಮುದಾಯ B) ನಗರ ಸಮುದಾಯ C) ಶಾಲಾ ಸಮುದಾಯ D) ಬುಡಕಟ್ಟು ಸಮುದಾಯ

5. ಮಾನವ ಸಮಾಜ ಜೀವಿಯಾಗುವ ಪ್ರಕ್ರಿಯೆಯನ್ನು ಹೀಗೆಂದು ಕರೆಯುತ್ತಾರೆ

A) ಸಂಸ್ಕೃತಿ B) ಸಂಪ್ರದಾಯ C) ಸಾಮಾಜಿಕರಣ D) ಸ್ತರ ವಿನ್ಯಾಸ

6. ಕಪ್ಪು ಮಣ್ಣನ್ನು ಕಪ್ಪು ಹತ್ತಿಯ ಮಣ್ಣು ಎಂದು ಕರೆಯುತ್ತಾರೆ ಏಕೆ?

A) ಇದು ಕಪ್ಪಾಗಿರುತ್ತದೆ B) ಎಲ್ಲಾ ಕಡೆ ಸಿಗುತ್ತದೆ

C) ಇದಕ್ಕೆ ತೇವಾಂಶ ಹಿಡಿದಿಟ್ಟುಕೊಳ್ಳುವ ಗುಣವಿದೆ

D) ಇದು ಎಲ್ಲಾ ಬೆಳೆಗಳಿಗೂ ಸೂಕ್ತವಾಗಿದೆ

7. ಸ್ಥಿರಾತ್ಮಕ ಅರ್ಥಶಾಸ್ತ್ರ ಈ ಭಾಷೆಯ ಪದದಿಂದ ಬಂದಿದೆ

A) ಲ್ಯಾಟಿನ್ B) ಇಟಾಲಿಯನ್C) ಗ್ರೀಕ್ D) ಅರೇಬಿಕ್

8. ಭಾರತದಲ್ಲಿ ಷೇರು ಮಾರುಕಟ್ಟೆ ಪ್ರಾರಂಭವಾದದ್ದು ಎಲ್ಲಿ

1) ಚೆನ್ನೈ 2) ಮುಂಬೈ3) ದೆಹಲಿ 4) ಬೆಂಗಳೂರು

**II . ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ 1x8=8**

9. ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದವರು ಯಾರು?

10. ಯಂಗ್ ಇಟಲಿ ಸಂಘಟನೆಯನ್ನು ಕಟ್ಟಿದವರು ಯಾರು?

11. ಭಾರತದ ಸಂವಿಧಾನ ಯಾವಾಗ ಜಾರಿಗೆ ಬಂದಿತು?

12. ಪಿತೃ ಪ್ರಧಾನ ಕುಟುಂಬ ಎಂದರೇನು?

13. ಭೂ ಬಳಕೆ ಎಂದರೇನು?

14. ಕರ್ನಾಟಕದಲ್ಲಿರುವ ಆಳವಾದ ಚಿನ್ನದ ಗಣಿ ಯಾವುದು?

15. ಹೊಸ ಆರ್ಥಿಕ ನೀತಿ ಯಾವಾಗ ಜಾರಿಗೆ ಬಂದಿತು?

16. ನಿರ್ವಹಣೆ ಎಂದರೇನು?

**III. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ**

17) ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ಮನೆತನಗಳು ಯಾವುವು?

18) ಕಾಶ್ಮೀರದ ಕಾರ್ ಕೋಟ ಸಾಮ್ರಾಜ್ಯದಲ್ಲಿ ಆಳಿದ ಪ್ರಮುಖ ರಾಜರುಗಳನ್ನು ಪಟ್ಟಿ ಮಾಡಿರಿ?

19) ಭಾರತದ ರಕ್ಷಣಾ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಾಲ್ಕು ವಿಭಾಗಗಳು ಯಾವುವು?

20) ಸಾಮಾಜಿಕ ಪ್ರಕ್ರಿಯೆಯಲ್ಲಿ ಧರ್ಮದ ಪಾತ್ರವೇನು?

21) ಕರ್ನಾಟಕದಲ್ಲಿ ಕಂಡು ಬರುವ ನಾಲ್ಕು ಋತುಮಾನಗಳು ಯಾವುವು?

22) ಕರ್ನಾಟಕದಲ್ಲಿ ಕಂಡುಬರುವ ವಿವಿಧ ರಸ್ತೆಗಳ ಪ್ರಕಾರಗಳಾವುವು?

23) ಹಣದ ವಿವಿಧ ರೂಪಗಳನ್ನು ಬರೆಯಿರಿ?

24) ಪ್ರದೇಶಕ್ಕನುಗುಣವಾಗಿ ವಿಭಾಗಿಸಲ್ಪಟ್ಟಿರುವ ಮಾರುಕಟ್ಟೆಯ ಪ್ರಕಾರಗಳು ಯಾವುವು?

**IV. ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯದಲ್ಲಿ ಉತ್ತರಿಸಿ. 3x9=27**

25) ಇಸ್ಲಾಂ ಧರ್ಮದ ಬೋಧನೆಗಳನ್ನು ಪಟ್ಟಿ ಮಾಡಿರಿ.

26) ಶಿವಾಜಿಯ ಆಡಳಿತ ಪದ್ಧತಿಯನ್ನು ವಿವರಿಸಿ.

27) ಕೈಗಾರಿಕಾ ಕ್ರಾಂತಿಯ ಪರಿಣಾಮಗಳು ಯಾವುವು?

28) ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಲು ಹೊಂದಿರಬೇಕಾದ ಅರ್ಹತೆಗಳು ಯಾವುವು?

29) ಕುಟುಂಬದ ಲಕ್ಷಣಗಳೇನು?

30) ಮಲೆನಾಡು ಪ್ರದೇಶವನ್ನು ಜೀವವೈದ್ಯತಾ ವಲಯ ಎಂದು ಗುರುತಿಸಲಾಗಿದೆ ಏಕೆ?

31) ಕೈಗಾರಿಕೆಗಳ ಸ್ಥಾನಿಕರಣದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು?

32) ಆರ್ಥಿಕ ಅಭಿವೃದ್ಧಿಯಲ್ಲಿ ದ್ವಿತೀಯ ವಲಯದ ಪ್ರಾಮುಖ್ಯತೆಯನ್ನು ವಿವರಿಸಿ.

33) ಮಾರುಕಟ್ಟೆಯ ಪ್ರಾಮುಖ್ಯತೆಯನ್ನು ವಿವರಿಸಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ 4x4=16**

34) ರಜಪೂತರು ಸಾಹಿತ್ಯಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸಿ

35) ಪುನರುಜ್ಜೀವನದ ಲಕ್ಷಣಗಳನ್ನು ವಿವರಿಸಿ

36) ರೆಡ್ ಕ್ರಾಸ್ ಸಂಸ್ಥೆಯ ಮೂಲಭೂತ ತತ್ವಗಳನ್ನು ವಿವರಿಸಿ

37) ವ್ಯವಸಾಯದ ಪ್ರಾಮುಖ್ಯತೆಯನ್ನು ವಿವರಿಸಿ

VI. **38) ಕರ್ನಾಟಕದ ನಕ್ಷೆಯನ್ನು ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ. 5x1=5**

a) ಬೀದರ್. b) ಶರಾವತಿ

c) ಶಿಂಷಾ d) ಬನ್ನೇರುಘಟ್ಟ